SRI. M. P. PRAKASH (Minister of state for Transport).—

a) At present there are no such proposals before Government.

b) Does not arise in view of reply to clause (a) above.

c) Yes.

Calling Attention to a matter of urgent public importance

Re : Situation created due to stoppage of N. R. E. P works and diverting the said funds for Rural Employment Guarantee Scheme.

SRI. M. MAHADEV.—Sir, I beg to call the attention of the Minister for Rural Development and Panchayat Raj to the situation created due to stoppage of N.R.E.P works and diverting the the said funds for Rural Employment Guarantee Scheme.

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯಿತ್ ರಾಜ್ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ನನ್ನ ಮಿತ್ರರಾದ ಮಾನ್ಯ ಮಹದೇವ್ ಅವರು ತಂದಿರುವ ಗಮನ ಸೆಳೆಯುವ ಸೂಚನೆಗೆ ಈ ರೀತಿ ಹೇಳಿಕೆಯನ್ನು ಕೊಡ ಬಯಸುತ್ತೇನೆ.

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು).—ಗ್ರಾಮೀಣ ಉದ್ಯೋಗ ದೃಢೀಕರಣ ಯೋಜನೆಯು ಈಗಾಗಲೇ ಕರ್ನಾಟಕದಲ್ಲಿ ಅನುಷ್ಠಾನದಲ್ಲಿದೆ. ಈ ಯೋಜನೆಯ ಉದ್ದೇಶವು ಅವಿದ್ಯಾವಂತ ಮತ್ತು ಕೌಶಲ್ಯವಿಲ್ಲದ ೧೮–೬೦ ವರ್ಷದೊಳಗಿರುವ ಎಲ್ಲಾ ವಯಸ್ಕರುಗಳಿಗೆ, ಗ್ರಾಮೀಣ ಪ್ರದೇಶಗಳಲ್ಲಿ ಯುಕ್ತ ಅಂತರದಲ್ಲಿ ಲಾಭ ಧಾಯಕ ಉದ್ಯೋಗವನ್ನು ಕಲ್ಪಿಸುವುದು ಆಗಿರುತ್ತದೆ. ೨೬-೧-೧೯೮೮ರಿಂದ ಅನುಷ್ಠಾನಕ್ಕೆ ಬರುವಂತೆ ಪ್ರತಿ ಜಿಲ್ಲೆಯ ಶೇಕಡ ೨೦ರಷ್ಟು ತಾಲ್ಲೂಕುಗಳನ್ನು ಆಯ್ಕೆ ಮಾಡಿ ಹಂತಹಂತವಾಗಿ ಈ ಯೋಜನೆಯನ್ನು ಕಾರ್ಯರೂಪಕ್ಕೆ ತರಲಾಗುವುದು. ಈಗಾಗಲೇ ರಾಜ್ಯದ ಳಿಗೆ ತಾಲ್ಲೂಕುಗಳಲ್ಲಿ ೨೬–೧–೮೪ರಿಂದ ಈ ಯೋಜನೆ ಜಾರಿಗೆ ಬಂದಿದ್ದು ಪ್ರತಿ ೬ ತಿಂಗಳ ಅಂತರದಲ್ಲಿ ಮತ್ತೇ ಶೇಕಡ ೨೦ರಷ್ಟು ತಾಲ್ಲೂಕುಗಳಿಗೆ ಯೋಜನೆಯನ್ನು ವಿಸ್ತರಿಸುತ್ತಾ ಕ್ರಮೇಣ ರಾಜ್ಯದಲ್ಲಿ ಎಲ್ಲಾ ತಾಲ್ಲೂಕುಗಳಲ್ಲೂ ಈ ಯೋಜನೆಯನ್ನು ಜಾರಿಗೊಳಿಸಲಾಗುವುದು. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆ (ಎನ್.ಆರ್.ಇ.ಪಿ.)ಯ ಉದ್ದೇಶವೂ ಸಹ ನಿರುದ್ಯೋಗಿಗಳಿಗೆ ಮತ್ತು ಅರೆನಿರುದ್ಯೋಗಿಗಳಿಗೆ ಉದ್ಯೋಗವನ್ನು ಗ್ರಾಮಾಂತರ ಪ್ರದೇಶದಲ್ಲಿ ಕಲ್ಪಿಸುವುದು ಬಾಳಿಕೆ ಬರುವಂಥ ಆಸ್ತಿಗಳ ನಿರ್ಮಾಣ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಅವಶ್ಯಕ ಸೌಲಭ್ಯಗಳನ್ನು ಕಲ್ಪಿಸಲು ಕೆಲಸ ಕಾರ್ಯಗಳನ್ನು ಕೈಗೊಳ್ಳಲಾಗುವುದು ಇವುಗಳೇ ಆಗಿರುತ್ತವೆ. ಹೀಗೆ ಮೇಲ್ಕಂಡ ಹೊಸ ಯೋಜನೆಯು ಹಾಗೂ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆಯು (ಎನ್.ಆರ್.ಇ.ಪಿ.) ಉದ್ದೇಶಗಳು ಮೂಲಶಃ ಒಂದೇ ಆಗಿರುತ್ತವೆ.

ಗ್ರಾಮಾಂತರ ಉದ್ಯೋಗ ದೃಢೀಕರಣ ಯೋಜನೆಯನ್ನು ಅನುಷ್ಠಾನಕ್ಕೆ ತರುವುದಕ್ಕೋಸ್ಕರ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆ (ಎನ್‌ಆರ್‌ಇಪಿ) ಯನ್ನು ನಿಲ್ಲಿಸಲು ಸರ್ಕಾರದಿಂದ ಯಾವುದೇ ತರಹದ ಆದೇಶವನ್ನು ಹೊರಡಿಸಿರುವುದಿಲ್ಲ. ರಾಷ್ಟ್ರೀಯ ಗ್ರಾಮಾಂತರ ಭೂರಹಿತ ಉದ್ಯೋಗ ಭರವಸೆ ಯೋಜನೆ (ಆರ್‌ಎಲ್‌ಇಜಿಪಿ) ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆ (ಎನ್‌ಆರ್‌ಇಪಿ) ಮತ್ತು ಬಣ ಬೇಸಾಯ ಯೋಜನೆ (Dry Land Project) ಈ ಎಲ್ಲಾ ಯೋಜನೆಗಳ ಮೂಲ ಉದ್ದೇಶ ಒಂದೇ ಆಗಿರುವುದರಿಂದ ಇವುಗಳಲ್ಲಿಯ ಒಂದು ಯೋಜನೆಗಾಗಿ ಇರಿಸಲ್ಪಟ್ಟ ಹಣವನ್ನು ಉಳಿದ ಯಾವುದೇ ಇನ್ನೊಂದು ಯೋಜನೆಯ ಉದ್ದೇಶ ಸಾಧನೆಗೆ ಉಪಯೋಗ ಮಾಡ ಬಹುದು ಮತ್ತು ಈ ಯೋಜನೆಗಳನ್ನು ಪುನರ್ ವ್ಯವಸ್ಥಿತ ರೀತಿಯಲ್ಲಿ ಕಾರ್ಯರೂಪಕ್ಕೆ ತರಬ

ಹುದು ಮತ್ತು ಹೀಗೆಮಾಡುವುದರಿಂದ ಈ ಎಲ್ಲಾ ಯೋಜನೆಗಳ ಗುರಿಯನ್ನು, ಉದ್ದೇಶಗಳನ್ನು ಒಟ್ಟಾರೆ ಸಾಧಿಸಬಹುದು ಎಂದು ತರ್ಕಿಸಲಾಗಿದೆ. ಅಲಿಸಲಾಗಿದೆ, ಆದ್ದರಿಂದ ಗ್ರಾಮಾಂತರ ಉದ್ಯೋಗ ದೃಢೀಕರಣ ಯೋಜನೆ ಜಾರಿ ಇರುವೆಡೆಗಳಲ್ಲಿ, ಈ ಮೇಲ್ಕಂಡ ಯೋಜನೆಗಳಲ್ಲಿ ದೊರೆಯುವ ಸಂಪನ್ಮೂಲಗಳನ್ನು ಒಂದು ಕಡೆ ಒಟ್ಟುಗೂಡಿಸಿ, ಯೋಜನೆಯನ್ನು ಅನುಷ್ಠಾನಕ್ಕೆ ತರಲು ಬಳಸಲಾಗುವುದು. ಅದಕ್ಕಾಗಿ ಯೋಜನೆಗಳನ್ನು ರೂಪಿಸುವಾಗ ಮತ್ತು ಆಮೇಲೆ ಯೊ ಜನೆಯನ್ನು ಅನುಷ್ಠಾನಕ್ಕೆ ತರುವಾಗ ಆಯ್ಕೆಯಾದ ತಾಲ್ಲೂಕುಗಳ ಪ್ರತಿ ಹಳ್ಳಿಯಲ್ಲಿಯೂ ಉದ್ಯೋಗ ಬೇಡಿಕೆಗೆ ತಕ್ಕಂತೆ ಮೇಲ್ಕಂಡ ಯೋಜನೆಗಳ ಸಂಪನ್ಮೂಲವನ್ನು ಕ್ರೋಢೀಕರಿಸಿ, ಕೆಲಸಕಾರ್ಯಗಳನ್ನು ಕೈಗೊಳ್ಳಬಹುದಾದಂತೆ ಸಕಲ ಪ್ರಯತ್ನಗಳನ್ನು ಮಾಡಲಾಗುತ್ತಿದೆ.

ಅದರಂತೆ ಈ ಯೋಜನೆಯ ಉದ್ದೇಶ ಈಡೇರುವುದಕ್ಕೋಸ್ಕರ ಆಯ್ಕೆಯಾದ ತಾಲ್ಲೂಕಿನ ಪ್ರತಿ ಹಳ್ಳಿಯಲ್ಲಿಯೂ ಮೇಲ್ಕಂಡ ಯೋಜನೆಗಳ ಕೆಲಸ ಕಾರ್ಯಗಳನ್ನು ಕೇಂದ್ರೀಕರಿಸುವಂತೆ, ಯೋಜನೆಯನ್ನು ರೂಪಿಸಲು ಸರ್ಕಾರವು ಸೂಕ್ತ ಸೂಚನೆ ನೀಡಿದೆ, ಈ ಕೆಳಗೆ ಸಮೂಹದಿಸಿದಂತೆ ಜಿಲ್ಲೆಗಳಿಗೆ ಹಣವನ್ನು ಯೋಜನೆಯ ಅನುಷ್ಠಾನಕ್ಕೆಂದು ಬಿಡುಗೆಡೆ ಮಾಡುವಾಗ, ಈ ಹಣವನ್ನು ಜನಬಲ ಉಪಯೋಗಿಸಿ (Labour Intensive) ಕಾರ್ಯಕ್ರಮಗಳಿಗಾಗಿ ಬಳಸಬೇಕೆಂದು ಆದೇಶ ನೀಡಲಾಗಿದೆ.

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಹಣ ಲಕ್ಷರೂ ಗಳಲ್ಲಿ
೧	ಬೀದರ್	೧೦-೦೦
೨	ಉತ್ತರ ಕನ್ನಡ	೨೦-೦೦
೩	ದಕ್ಷಿಣ ಕನ್ನಡ	೧೫-೦೦
೪	ಮಂಡ್ಯ	೧೮-೦೦
೫	ಕೊಡಗು	೧೦-೦೦
೬	ರಾಯಚೂರು	೧೫-೦೦
೭	ಶಿವಮೊಗ್ಗ	೨೧-೦೦
೮	ಗುಲ್ಬರ್ಗಾ	೨೦-೦೦
		ಒಟ್ಟು — ೧೨೧-೦೦

ಆದಾಗ್ಯೂ, ಜಿಲ್ಲಾಧಿಕಾರಿಗಳೂ ಮತ್ತು ಇತರ ಸಂಬಂಧಪಟ್ಟ ಅಧಿಕಾರಿಗಳು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆ (ಎನ್‌ಆರ್‌ಇಪಿ) ಯಲ್ಲಿ ಕೈಗೊಂಡಿರುವ ಕೆಲಸಕಾರ್ಯಗಳನ್ನು ಆ ಯೋಜನೆಯ ಮಾರ್ಗಸೂಚಿಯಂತೆ ಅನುಷ್ಠಾನಕ್ಕೆ ತರಬೇಕಾಗುತ್ತದೆ. ಈ ಎಲ್ಲಾ ಸಂಗತಿಗಳನ್ನು ಗಮನಿಸಿದಾಗ, ಗ್ರಾಮೀಣ ಉದ್ಯೋಗ ದೃಢೀಕರಣ ಯೋಜನೆಯನ್ನು (ಆರ್‌ಇಜಿಎಸ್) ಅನುಷ್ಠಾನಗೊಳಿಸುವುದಕ್ಕೋಸ್ಕರ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆ (ಎನ್‌ಆರ್‌ಇಪಿ) ಕೆಲಸ ಕಾರ್ಯಗಳನ್ನು ಸ್ಥಗಿತಗೊಳಿಸಿಲ್ಲವೆಂಬುದು ವೇದ್ಯವಾಗುತ್ತಿದೆ.

ಮೊದಲನೇ ಹಂತದಲ್ಲಿ (ಜನವರಿ ೧೯೪೪) ಆಯ್ಕೆಯಾದ ರಾಷ್ಟ್ರೀಯ ಉದ್ಯೋಗ ದೃಢೀಕರಣ ಯೋಜನೆಯ ತಾಲ್ಲೂಕುಗಳು

ಕ್ರಮ ಸಂಖ್ಯೆ	ಜಿಲ್ಲೆಗಳು	ಜಿಲ್ಲೆಗಳು	ತಾಲ್ಲೂಕುಗಳು
೧.	ರಾಯಚೂರು	೧. ರಾಯಚೂರು	೨. ದೇವನದುರ್ಗ
೨	ಗುಲ್ಬರ್ಗಾ	೩. ಅಲಾಂದ್	೫. ಅಫಜಲ್‌ಪುರ
		೪. ಚಿತಾಪುರ	
೩.	ಚಿಕ್ಕಮಗಳೂರು	೬. ಕಡೂರು	
೪.	ದಕ್ಷಿಣ ಕನ್ನಡ	೭. ಕಾರ್ಕಳ	೮. ಸೂಳ್ಯ
೫.	ಬೆಳಗಾಂ	೯. ಸೌಂದತ್ತಿ	೧೧. ರಾಯ್‌ಬಾಗ್
		೧೦. ಚಿಕ್ಕೋಡಿ	
೬.	ಶಿವಮೊಗ್ಗ	೧೨. ಚನ್ನಗಿರಿ	
		೧೩. ಹೊನ್ನಾಳ್ಳಿ	
೭.	ಮಂಡ್ಯ	೧೪. ನಾಗಮಂಗಲ	
		೧೫. ಮಳವಳ್ಳಿ	
೮.	ತುಮಕೂರು	೧೬. ಪಾವಗಡ	
		೧೭. ಚಿಕ್ಕನಾಯ್ಕನಹಳ್ಳಿ	
೯.	ಮೈಸೂರು	೧೮. ಚಾಮರಾಜನಗರ	೨೦. ಗುಂಡ್ಲುಪೇಟೆ
		೧೯. ಕೊಳ್ಳೇಗಾಲ	
೧೦.	ಕೋಲಾರ	೨೧. ಮುಳಬಾಗಿಲು	೨೨. ಶ್ರೀನಿವಿದನೂರು
೧೧.	ಚಿತ್ರದುರ್ಗ	೨೩. ಚಿತ್ರದುರ್ಗ	೨೪. ಚಳ್ಳಕೆರೆ
೧೨.	ಬಿಜಾಪುರ	೨೫. ಬಾಗಲಕೋಟೆ	೨೭. ಮುದ್ದೇಬಿಹಾಳ
		೨೬. ಇಂಡಿ	೨೮. ಜಮಖಂಡಿ
೧೩.	ಬೀದರ್	೨೯. ಬಸವಕಲ್ಯಾಣ	
೧೪.	ಬಳ್ಳಾರಿ	೩೦. ಹಡಗಳ್ಳಿ	೩೧. ಹರಪನಹಳ್ಳಿ
೧೫.	ಹಾಸನ	೩೨. ಅರಕಲ್‌ಗೂಡ್	೩೪. ಹಾಸನ
		೩೩. ಬೇಲೂರು	೩೫. ಹೊಳೆನರಸೀಪುರ
೧೬.	ಉತ್ತರ ಕನ್ನಡ	೩೬. ಹಳಿಯಾಳ	
೧೭.	ಧಾರವಾಡ	೩೭. ಕೋಣ	೩೯. ಹುಬ್ಬಳ್ಳಿ
		೩೮. ಬ್ಯಾಡಗಿ	೪೦. ಹಾವೇರಿ
೧೮.	ಕೊಡಗು	೪೧. ಸೋಮವಾರಪೇಟೆ	
೧೯.	ಬೆಂಗಳೂರು	೪೨. ಆನೇಕಲ್ಲು	೪೪. ಕನಕಪುರ
		೪೩. ಮಾಗಡಿ	೪೫. ದೊಡ್ಡಬಳ್ಳಾಪುರ